# ಕನ್ನಡದ ಕುಲದೇವಿ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ
ಮುನ್ನಡೆಯ ಕನ್ನಡದ ದಾರಿ ದೀವಿಗೆ ನೀಯೆ

ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳಸಿ
ಕಾಮ ಕ್ರೋಧವನಳಿಸಿ ಕಾಪಾಡು ಬಾ ತಾಯೆ
ಒಂದಾದ ದೇಶದಲಿ ಹೊಂದಿ ಬಾಳದ ಸುತರ
ಹೊಸ ಬೆಸುಗೆಯಲಿ ಬಿಗಿದು ಒಂದುಗೂಡಿಸೆ ತಾಯೆ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ

ಯಾವೆಣ್ಣೆಯಾದರು ಬೆಳಗುವುದೆ ಗುರಿಯೆಂಬ
ತತ್ವವನು ನೀನೆತ್ತಿ ತೋರು ಬಾ ತಾಯೆ
ಎದೆಯಂತರಾಳದಲಿ ಪುಟಿವ ಕಾರಂಜಿಯಲಿ
ಒಂದಾಗಿ ಕೂಗಲಿ ಕನ್ನಡ ಕನ್ನಡಾ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ

# **Kannadada Kuladevi**

Kannadada Kuladevi Kaapadu baa thaaye
Munnadeya kannadada daari deevige neeye

Prema karuneya kalasi shanthi sahaneya belasi
Kaama krodhavanalisi kaapadu baa thaaye
Ondhada deshadali hondi baalada suthara
Hosa besugeyali bigidu Ondugoodise thaaye

Kannadada kuladevi kaapadu baa thaaye

Yaavenneyaadaru belaguvude guriyemba
Thatwavanu neenetti thoru baa thaaye
Hedeyantharaaladali putiva kaaranjiyali
Ondagi koogali kannada kannadaa

Kannadada kuladevi kaapadu baa thaaye!!